# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ, ಹೊರಮಾವು ಗ್ರಾಮ, ಬೆಂಗಳೂರು- 560113

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ /2021-22 ದಿನಾಂಕ: 17.07.2021

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020-21 ದಿನಾಂಕ:21/09/2020 ರ ಆದೇಶದಂತೆ ಹೊರಮಾವು ವಾರ್ಡ್ ಸಂಖ್ಯೆ-25 ರ ನೋಡಲ್ ಅಧಿಕಾರಿಯಾದ ಶ್ರೀಮತಿ.ಸರೋಜಾದೇವಿ ಉಪ ಆಯುಕ್ತರು (ಮಹದೇವಪುರ) ರವರ ಅಧ್ಯಕ್ಷತೆಯಲ್ಲಿ ದಿನಾಂಕ:-17.07.2021 ರಂದು ಬೆಳಗ್ಗೆ 11.00ಗಂಟೆಗೆ ಹೊರಮಾವು ಉಪವಿಭಾಗದ ವಾರ್ಡ್-25 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.

ಉಪಸ್ಥಿತರು:

| ಕ್ರಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| | | ಅಧಿಕಾರಿಗಳು | |
| 1 | ಶ್ರೀಮತಿ.ಸರೋಜಾದೇವಿ | ನೋಡಲ್ ಅಧಿಕಾರಿ ವಾ.ನಂ.25 ಹಾಗೂ ಉಪ ಆಯುಕ್ತರು (ಮಹದೇವಪುರ) | 9480684059 |
| 2 | ಶ್ರೀ.ಚಂದ್ರಶೇಖರ್.ಎ.ಜಿ | ಸ.ಕಾ.ಅ (ಹೊರಮಾವು ಉಪ-ವಿಭಾಗ) | |
| 3 | ಶ್ರೀ.ರಮೇಶ್ | ಕಿರಿಯ ಅಭಿಯಂತರರು ವಾರ್ಡ್-25 | 9739838297 |
| 4 | ಶ್ರೀ.ತಿರುಮಲ ಪ್ರಸಾದ್ | BWSSB (PMC) | 9591646857 |
| 5 | ಶ್ರೀ.ಸುನೀಲ್ ಪ್ರಕಾಶಲೇ | - | 8830833780 |
| 6 | ಶ್ರೀ.ಮೋಹನ ರಂಗ | JE, BESCOM-E-8, | -- |
| 7 | ಶ್ರೀ.ಕೋದಂಡರಾಮ | ಸ್ಟ್ರೀಟ್ ಲೈಟ್ ಗುತ್ತಿಗೆದಾರರು | |
| 8 | ಶ್ರೀ. ಸಂಜಯ್ ಕುಮಾರ್.ಎಸ್ | ಹಿರಿಯ ಆರೋಗ್ಯ ಪರಿವೀಕ್ಷಕರು | 9742919411 |
| 9 | ಶ್ರೀ.ಹರೀಶ್ ಕುಮಾರ್.ಕೆ.ವಿ | ಕಿರಿಯ ಆರೋಗ್ಯ ಪರಿವೀಕ್ಷಕರು | |
| 10 | ಶ್ರೀ.ಪಿ.ವಿ.ದಾಮೋದರನ್ & ಬಿ.ಎನ್.ಆರುಗಂ | ಸರ್.ಎಂ.ವಿ ನಗರ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್ | 9845209947 |
| 11 | ಶ್ರೀ.ಸಂಪತ್ ಕುಮಾರ್ | ಚೇಳಿಕರೆ | |
| 12 | ಶ್ರೀಮತಿ.ರತ್ನ ಎಂ ಗೌಡ, ಶ್ರೀ.ಬಿಂದೀಶ್.ಆರ್ ಮತ್ತು ಶ್ರೀ.ಸಾಯಿ ಮಹೇಶ್. ಶ್ರೀ.ತಿರುಮಲ ಸ್ವಾಮಿ | ರೋಚ್ ಎನ್‌ಕ್ಲೇವ್, ಶ್ರೀ ಸಾಯಿ ರೆಸಿಡೆನ್ಸಿ ಲೇಔಟ್. | 9986766098 |
| 13 | ಶ್ರೀ.ಲಿಯೋ ಕ್ರಿಸ್ಟೋ & ಸುಂದರ್ ರಾಜನ್ | ಪ್ರಕೃತಿ ಟೌನ್‌ಶಿಪ್ ಅಪಾರ್ಟ್‌ಮೆಂಟ್ | 9845924885 & 9901767699 |
| 14 | ಶ್ರೀಮತಿ.ಸಿಂಧು. | ಬಂಜಾರ ಲೇಔಟ್ | 9686804536 |
| 15 | ಶ್ರೀ. ಶ್ರೀಕಂಠ | ಜಯಂತಿನಗರ | 9740085506 |
| 16 | ಶ್ರೀ.ಶಂಕರ್ ನಾರಾಯಣನ್ | ಜಯಂತಿನಗರ | 9449693195 |
| 17 | ಶ್ರೀ.ಸತೀಶ್ | ಹೊಯ್ಸಳ ನಗರ | 9886907860 |
| 18 | ಶ್ರೀ.ಮಹೇಶ್ | ನಂದನಂ ಕಾಲೋನಿ | |
| 19 | ಶ್ರೀ.ನವೀನ್ ಕುಮಾರ್ & ಪ್ರದೀಪ್ | ಎಸ್.ಎಲ್.ವಿ ಲೇಔಟ್ | 9686195473 9686755006 |

Scanned with CamScanner

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.25 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲೂಎಸ್ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

<u>ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-</u>

<u>ಶ್ರೀಮತಿ.ರತ್ನ ಎಂ ಗೌಡ, ಶ್ರೀ.ಬಿಂದೀಶ್.ಆರ್ ಮತ್ತು ಶ್ರೀ.ಸಾಯಿ ಮಹೇಶ್, ಶ್ರೀ.ತಿರುಮಲ ಸ್ವಾಮಿ, ರೋಚ್ ಎನ್‌ಕ್ಲೇವ್, ಶ್ರೀ ಸಾಯಿ ರೆಸಿಡೆನ್ಸೀ ಲೇಔಟ್:-</u> 2ನೇ ಕ್ರಾಸ್, ಸಾಯಿ ರೆಸಿಡೆನ್ಸಿ, ಬಂಜಾರ ಲೇಔಟ್ ರವರು ಮಾತನಾಡುತ್ತಾ , ಬಿ.ಡಬ್ಲ್ಯೂಎಸ್.ಎಸ್.ಬಿ ಇಲಾಖೆ ವತಿಯಿಂದ ಕಾವೇರಿ ನೀರು ಸಂಪರ್ಕಕ್ಕಾಗಿ ಪೈಪುಗಳನ್ನು ಅಳವಡಿಸಲು ರಸ್ತೆಗಳನ್ನು ಅಗೆದಿದ್ದು, ತಹಲ್‌ವರೆವಿಗೂ ರಸ್ತೆ ಸಮಪಾಲು ಪಡದೇ ಸಾರ್ವಜನಿಕರ ಓಡಾಟಕ್ಕೆ ಮತ್ತು ಸಂಚಾರಕ್ಕೆ ತೊಂದರೆಯಾಗುತ್ತಿರುವುದರಿಂದ ರಸ್ತೆಗಳನ್ನು ಸರಿಪಡಿ, ಡಾಂಬರೀಕರಣ ಮಾಡಿಕೊಡಲು ಕೋರಿರುತ್ತಾರೆ.

<u>ಕ್ರಮ:-</u> ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂಎಸ್.ಎಸ್.ಬಿ/ಹೊರಮಾವು ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

<u>ಶ್ರೀ.ಆರ್ಮುಗಂ & ದಾಮೋದರನ್ ಸರ್.ಎಂ.ವಿ ನಗರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್:-</u> ರವರು ಮಾತನಾಡಿ, 5ನೇ ಮುಖ್ಯರಸ್ತೆ, ಎ ಕ್ರಾಸ್, ಸರ್.ಎಂ.ವಿ ನಗರ ಇಲ್ಲಿ ಬೀದಿ ದೀಪ/ ವಿದ್ಯುತ್ ಕಂಬಗಳ ಸ್ವಿಚ್‌ಗಳು ದುರಸ್ಥಿಯಾಗಿದ್ದು, ದುರಸ್ತಿಯನ್ನು ಸರಿಪಡಿಸಿ ಕೊಡಲು ಮತ್ತು ನೀರಿನ ಸಮಸ್ಯೆ ಹಾಗೂ ಖಾಲಿ ನಿವೇಶನಗಳಲ್ಲಿ ಕಸಗಳನ್ನು ತುಂಬಿರುತ್ತಾರೆ.

<u>ಕ್ರಮ:-</u> ಬೀದಿ ದೀಪಗಳ ನಿರ್ವಹಣೆ ಅಧಿಕಾರಿಗಳಾದ ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ರವರು ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

<u>ಶ್ರೀ. ಸಂಪತ್ ಕುಮಾರ್, ಚೇಳೆಕೆರೆ ಗ್ರಾಮಸ್ಥರು:-</u> ರವರು ಮಾತನಾಡಿ ವಾರ್ಡ್ ಸಂಖ್ಯೆ 25 ರ ಚೇಳೆಕೆರೆ ಗ್ರಾಮದಲ್ಲಿ ವಾಟರ್ ಪ್ಲಾಂಟ್ ಬಳಿ ಮೋಟರ್ ಪಂಪ್ ಮತ್ತು ಕೇಬಲ್ ಹಾಗೂ ಗಣೇಶ ದೇವಸ್ಥಾನದ ರಸ್ತೆಯಲ್ಲಿ ಕೊಳವೆಬಾವಿಯ ಮೋಟರ್ ಪಂಪ್ ಹಾಗೂ ಪಿಳ್ಳಪ್ಪ ಬಡಾವಣೆಯ ಮೋಟರ್ ಪಂಪ್‌ಗಳು ಸುಮಾರು ವರ್ಷಗಳಿಂದ ಚಾಲನೆಯಲ್ಲಿದ್ದು, ಪದೇ ಪದೇ ದುರಸ್ಥಿಯಾಗುತ್ತಿದ್ದು. ಕುಡಿಯುವ ನೀರಿಗೆ ತೊಂದರೆಯಾಗುತ್ತಿರುತ್ತದೆ. ಈ ಮೂರು ಮೋಟರ್ ಪಂಪ್ ಹಾಗೂ ಕೇಬಲನ್ನು ಬದಲಾಯಿಸಿ ಹೊಸ ಮೋಟರ್ ಪಂಪ್‌ಗಳು ಮತ್ತು ಕೇಬಲ್‌ನ್ನು ಅಳವಡಿಸಿ ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಕೋರಿಕೊಂಡಿರುತ್ತಾರೆ. ಮತ್ತು ಹೊರಮಾವು ವಾರ್ಡ್ ಸಂಖ್ಯೆ-25 ರಲ್ಲಿ 9 ಹಳ್ಳಿಗಳು ಬರುತ್ತಿದ್ದು, ಈ ಹಳ್ಳಿಗಳಿಗೆ ಸಂಬಂಧಿಸಿದಂತೆ ಸುಮಾರು 170 ಬಡಾವಣೆಗಳು ಇದ್ದು, ಈ ಹಳ್ಳಿಗಳು ಮತ್ತು ಬಡಾವಣೆಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ನಿರ್ವಹಣೆಯನ್ನು ಪಾಲಿಕೆಯು ಮಾಡುತ್ತಿದ್ದು, ಇಲ್ಲಿನ ಸಾರ್ವಜನಿಕರಿಗೆ ಕುಡಿಯುವ ನೀರನ್ನು ಕೊಳವೆಬಾವಿಯಿಂದ ಒದಗಿಸಲು ಸುಮಾರು 50ಜನ ನೀರು ಸರಬರಾಜುಗಾರರು(ವಾಟರ್‌ಮೆನ್) ಕಾರ್ಯನಿರ್ವಹಿಸುತ್ತಿದ್ದು, ಇವರಿಗೆ ಪಾಲಿಕೆಯಿಂದಾಗಲೀ ಬೇರೆ ಹೊರಗುತ್ತಿಗೆಯಿಂದಾಗಲೀ ವೇತನವನ್ನು ಪಾವತಿಸುತ್ತಿರುವುದಿಲ್ಲ. ಇವರ ಜೀವನಕ್ಕೆ ತುಂಬಾ ತೊಂದರೆಯಾಗಿದ್ದು, ಇವರಿಗೆ ಇನ್ನುಮುಂದೆ ವೇತನವನ್ನು ಪಾವತಿಸಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲು ಕೋರಿಕೊಂಡಿರುತ್ತಾರೆ. ಹಾಗೂ ವಾರ್ಡ್ ವ್ಯಾಪ್ತಿಯ ಅಡ್ಡರಸ್ತೆಗಳಲ್ಲಿ ಹೂಳು ತೆಗೆಯುವುದು ತಾಂತ್ರಿಕ ಶಾಖೆ ಅಥವಾ ಆರೋಗ್ಯ ಶಾಖೆ(ಘನತ್ಯಾಜ್ಯ ನಿರ್ವಹಣೆ) ರವರ ಕಾರ್ಯ ವ್ಯಾಪ್ತಿಗೆ ಬರುವ ಕುರಿತು ತಿಳಿಸಲು ಕೋರಿಕೊಂಡಿರುತ್ತಾರೆ.

<u>ಕ್ರಮ:-</u> ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗರವರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನ ತ್ಯಾಜ್ಯ ನಿರ್ವಹಣೆ ರವರಿಗೆ ಪರಿಶೀಲಿಸಿ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

Scanned with CamScanner

ಶ್ರೀ. ಸತೀಶ್, ಹೊಯ್ಸಳನಗರ ಗ್ರಾಮ:- ರವರು ಮಾತನಾಡಿ ವಾರ್ಡ್ ಸಂಖ್ಯೆ 25 ರ ಹೊಯ್ಸಳ ನಗರದಲ್ಲಿ ಇತ್ತೀಚಿಗೆ ಬಿ.ಡಬ್ಲ್ಯೂಎಸ್.ಎಸ್.ಬಿ ವತಿಯಿಂದ ಒಳಚರಂಡಿ ಕೊಳವೆಸಾಲನ್ನು ಅಳವಡಿಸುತ್ತಿದ್ದು, ಈ ಕೊಳವೆಸಾಲು ಅಳವಡಿಸುವ ಸಂಧರ್ಭದಲ್ಲಿ ಪಾಲಿಕೆಯಿಂದ ಸಾರ್ವಜನಿಕರಿಗೆ ಕುಡಿಯುವ ನೀರು ಸರಬರಾಜಾಗುತ್ತಿದ್ದ ಕೊಳವೆಸಾಲನ್ನು ಅಡ್ಡರಸ್ತೆಗಳು ಮತ್ತು ಮುಖ್ಯ ರಸ್ತೆಗಳಲ್ಲಿ ಒಡೆದು ಹಾಕಿದ್ದು, ಈಗ ಇದ್ದಕ್ಕಿದ್ದ ಹಾಗೆ ಸಾರ್ವಜನಿಕರಿಗೆ ಕುಡಿಯುವ ನೀರು ಸ್ಥಗಿತಗೊಂಡಿದ್ದು, ತೊಂದರೆಯಾಗಿರುತ್ತದೆ. ಈ ಬಗ್ಗೆ ಒಡೆದು ಹೋಗಿರುವ ಕೊಳವೆಸಾಲನ್ನು ಬದಲಾಯಿಸಿ ಅಳವಡಿಸಲು ಕೋರಿಕೊಂಡಿರುತ್ತಾರೆ. ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ರವರು ಮಾತನಾಡಿ ತುರ್ತಾಗಿ ಕೊಳವೆಸಾಲನ್ನು ಅಳವಡಿಸಲು ಯಾವುದೇ ಅನುದಾನ ಸದ್ಯಕ್ಕೆ ಇರುವುದಿಲ್ಲ. ಮುಂದಿನ ಆಯವ್ಯಯದಲ್ಲಿ ಅನುದಾನವನ್ನು ಮೀಸಲಿರಿಸಿ ಅನುಮೋದನೆ ಪಡೆದು, ಟೆಂಡರ್ ಕರೆದು ಕೊಳವೆಸಾಲಿನ ಕಾಮಗಾರಿ ನಿರ್ವಹಿಸಲು ಸುಮಾರು 6 ತಿಂಗಳ ಕಾಲಾವಕಾಶ ಬೇಕಾಗಿರುವುದರಿಂದ ಹಾಲಿ ಇದ್ದ ಕೊಳವೆಸಾಲನ್ನು ಬಿ.ಡಬ್ಲ್ಯೂಎಸ್.ಎಸ್.ಬಿ ಯಿಂದ ಒಡೆದು ಹಾಕಿದ್ದು, ಇದನ್ನು ತುರ್ತಾಗಿ ಬಿ.ಡಬ್ಲ್ಯೂಎಸ್.ಎಸ್.ಬಿ ವತಿಯಿಂದ ತುರ್ತಾಗಿ ಬದಲಾಯಿಸಿ ಅಳವಡಿಸಲು ಸಭೆಯು ಸೂಚನೆ ನೀಡಲಾಯಿತು.

ಕ್ರಮ:- ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ರವರು ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀ.ಮಹೇಶ್, ರವರು ಮಾತನಾಡಿ ವಾರ್ಡ್ ಸಂಖ್ಯೆ 25 ಋ ನಂದನಂ ಕಾಲೋನಿ, ಬಾಬುಸಾಪಲ್ಯ ನಗರದ ಪ್ರಮುಖ ರಸ್ತೆಗಳಲ್ಲಿ ವ್ಯಾಪಾರಸ್ಥರು ಪಾದಚಾರಿ ಮಾರ್ಗದಲ್ಲಿ ತಮ್ಮ ವ್ಯಾಪರದ ಸಾಮಗ್ರಿಗಳನ್ನು ಇಟ್ಟು ವ್ಯಾಪರ ಮಡುತ್ತಿದ್ದು, ಇದರಿಂದ ಪಾದಚಾರಿಗಳ ಓಡಾಟಕ್ಕೆ ತೋಂದರೆಯಾಗುತ್ತಿದ್ದ ಹಿನ್ನಲೆಯಲ್ಲಿ ನಗರ ಸಂಚಾರ ಪೋಲಿಸರು ಪದಚಾರಿ ಮಾರ್ಗವನ್ನು ತೆರವುಗೊಳಿಸುವ ಕಾರ್ಯಚರಣೆಯನ್ನು ಮಾಡಿಸಲು ಕೋರಿರುತ್ತಾರೆ ಹಾಗೂ ಮುಖ್ಯ ರಸ್ತೆಗಳಲ್ಲಿ ಹಳೆ ಗಾಡಿ/ದುರಸ್ತಿ/ಅನುಪಯುಕ್ತ ಗಾಡಿಗಳನ್ನು ನಿಲ್ಲಿಸಿರುತ್ತಾರೆ ಈ ವಿಷಯದ ಬಗ್ಗೆ ನಗರ ಸಂಚಾರ ಪೋಲಿಸರು ಕ್ರಮ ವಹಿಸಲು ಕೋರಿರುತ್ತಾರೆ.

ಕ್ರಮ:- ನಗರ ಸಂಚಾರ ಪೋಲಿಸ್ ರಾಮಮೂರ್ತಿನಗರ ಮತ್ತು ಹೆಣ್ಣೂರು ಪೊಲೀಸ್ ಠಾಣೆ ರವರು ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀ.ರಾಮಚಂದ್ರ:- ರವರು ಮಾತನಾಡಿ, ಹೊರಮಾವು ವೃತ್ತದಿಂದ ರಾಘವೇಂದ್ರ ವೃತ್ತದವರೆಗೆ, ಎಸ್ಟರ್ ಎನ್‌ಕ್ಲೇವ್ ಮತ್ತು ಜಯಂತಿನಗರ ಮುಖ್ಯರಸ್ತೆಗಳಲ್ಲಿ ದಿನಾಂಕ:27/07/2021 ರಿಂದ 27/08/2021 ರವರೆಗೆ ಸಸಿಗಳನ್ನು ನೆಡಲು ಅನುಮತಿಗೆ ಕೋರಿರುತ್ತಾರೆ.

ಕ್ರಮ:-ತೋಟಗಾರಿಕೆ ಇಲಾಖೆಯಲ್ಲಿ ಅನುಮತಿ ಪಡೆಯಲು ಹಾಗೂ ಸಂಬಂಧಪಟ್ಟ ತೋಟಗಾರಿಕೆ ಅಧೀಕ್ಷಕರು ಕ್ರಮಕೈಗೊಳ್ಳಲು ಸಭೆಯಲ್ಲಿ ಸೂಚಿಸಿದರು.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ಉಪ-ವಿಭಾಗ ರವರು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

M. [signature] 17-7-21

ನೋಡಲ್ ಅಧಿಕಾರಿ ವಾರ್ಡ್ ನಂ.25
ಹಾಗೂ ಉಪ ಆಯುಕ್ತರು
ಮಹದೇವಪುರ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

[signature]
ಕಿರಿಯ ಅಭಿಯಂತರರು
ಹೊರಮಾವು ವಾರ್ಡ್‌ನಂ.25
ಬಿ.ಬಿ.ಎಂ.ಪಿ

Scanned with CamScanner